C.R.P.67

Form No.4 (Civil)
Deposition Sheets
(R.P.No.57)

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.121/2021 ಸಿ. ಡಬ್ಲ್ಯೂ- 29 ಪಿ. ಡಬ್ಲ್ಯೂ-20

ದಿನಾಂಕಃ- 02.08.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಡಾ. ನಿಶಾಂತ್ .ಬಿ.ಎಸ್ |
| ತಂದೆಯ ಹೆಸರು | ಶಂಕರ |
| ವಯಸ್ಸು | 33 ವರ್ಷ |
| ಉದ್ಯೋಗ | ಅಸಿಸ್ಟಂಟ್ ಪ್ರೊಫೆಸರ್ ಚಾಮುಂಡೇಶ್ವರಿ ಮೆಡಿಕಲ್ ಕಾಲೇಜು, ಚೆನ್ನಪಟ್ಟಣ |
| ವಾಸ | ಮಂಡ್ಯ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. 2020 ನೇ ಇಸವಿ ಆಗಸ್ಟ್ ತಿಂಗಳಿನಿಂದ 2021 ನೇ ಇಸವಿ ಮೇ ತಿಂಗಳವರೆಗೆ ನಾನು ಮದ್ದೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ಮಾಡಿದ್ದೇನೆ.

2. ದಿಃ 10.05.2021 ರಂದು ರಾತ್ರಿ 9.45 ರ ಸುಮಾರಿಗೆ ಓರ್ವ ಸುನಿಲ್ ಕುಮಾರ್ ಬಿನ್ ಕಾಡೇಗೌಡ, ಸುಮಾರು 25 ವರುಷ, ಗೆಜ್ಜಲಗೆರೆ ವಾಸಿ, ಈತನು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದರು.

3. ಸದರಿ ಸುನಿಲ್ ಕುಮಾರ್ ರವರು ನಮ್ಮ ಆಸ್ಪತ್ರೆಗೆ ಬಂದಾಗ ಆತನು ಅರೆಪ್ರಜ್ಞಾವಸ್ಥೆಯಲ್ಲಿ ಇದ್ದನು ಮತ್ತು ಆತನ ತಲೆಯ ಎಡ ಭಾಗದಲ್ಲಿ 5 ಸೆಂಟಿ ಮೀಟರ್ ಉದ್ದ ಮತ್ತು 0.5 ಸೆಂಟಿ ಮೀಟರ್ ಅಗಲದ ಒಂದು lacerated ಗಾಯ ಇತ್ತು.

4. ಸದರಿ ಸುನಿಲ್ ಕುಮಾರ್ ರವರ ತಲೆಯಲ್ಲಿ ಆಗಿದ್ದ ಗಾಯಕ್ಕೆ ಹೊಲಿಗೆಯನ್ನು ಹಾಕಲಾಗಿತ್ತು ಮತ್ತು ಅರೆವಳಿಕೆ (local anaesthesia) ನೀಡಲಾಯಿತು. ಸದರಿ ಸುನಿಲ್ ಕುಮಾರ್ ರವರು ಹಾಗೆ ಸ್ವಲ್ಪ ಹೊತ್ತು ಕುಳಿತುಕೊಂಡು ಸುಧಾರಿಸಿಕೊಂಡರು ನಂತರ ಆತನ ದೇಹವನ್ನು ಪರೀಕ್ಷೆ ಮಾಡಿದಾಗ ಆತನ ದೇಹದ ಮೇಲೆ ಈ ಕೆಳಕಂಡ ಇತರೆ ಗಾಯಗಳು ಕಂಡು ಬಂದವು.

a). ಎಡ ಮೊಣಕೈ ಮೇಲೆ (elbow) 5 ಸೆಂಟಿ ಮೀಟರ್ X 3 ಸೆಂಟಿ ಮೀಟರ್ ಗಾತ್ರದ ತರಚು ಗಾಯ

b). ಕೆಳಭಾಗದ ಬೆನ್ನಿನ ಮೇಲೆ 15 ಸೆಂಟಿ ಮೀಟರ್ X 0.5 ಸೆಂಟಿ ಮೀಟರ್ ಗಾತ್ರದ ಒಂದು ಲಂಭಾಕಾರದ ತರಚು ಗಾಯ

c). ಮುಖದ ಎಡಭಾಗದಲ್ಲಿ 3 ಸೆಂಟಿ ಮೀಟರ್ X 1 ಸೆಂಟಿ ಮೀಟರ್ ಗಾತ್ರದ ತರಚು ಗಾಯ

d). ಎಡ ತೋಳಿನ ಮೇಲೆ 5 ಸೆಂಟಿ ಮೀಟರ್ X 4 ಸೆಂಟಿ ಮೀಟರ್ ಗಾತ್ರದ ತರಚು ಗಾಯ ಇದ್ದವು.

5. ಸದರಿ ಸುನಿಲ್ ಕುಮಾರ್ ರವರು ಸ್ವಲ್ಪ ಸುಧಾರಿಸಿಕೊಂಡು ಮಾತನಾಡುವ ಸ್ಥಿತಿಗೆ ಬಂದ ನಂತರ ಆತನನ್ನು ಉದ್ದೇಶಿಸಿ "ಏನಾಯಿತು " ಎಂದು ವಿಚಾರಿಸಿದಾಗ ಆತನು " ಗೆಜ್ಜಲಗೆರೆ ಬಳಿ ರಾತ್ರಿ 8.30 ರ ಸಮಯದಲ್ಲಿ ಹಲ್ಲೆ ಆಯಿತು ಮತ್ತು ನನಗೆ ಪ್ರಜ್ಞೆ ಹೋಗಿತ್ತು, ಪ್ರಜ್ಞೆ ಬಂದ ನಂತರ ಇಲ್ಲಿಗೆ ಬಂದೆನು" ಎಂದು ಹೇಳಿದನು.

6. ಸದರಿ ಸುನಿಲ್ ಕುಮಾರ ರವರು ಹೇಳಿದ ಹಲ್ಲೆಯ ಇತಿಹಾಸದ ವಿಷಯವನ್ನು ಮತ್ತು ಸುನಿಲ್ ಕುಮಾರನ ದೇಹದ ಮೇಲೆ ಅಗಿದ್ದ ಗಾಯಗಳ ವಿವರಗಳನ್ನು ನಾನು medico legal cases ಗಳ ಸಂಬಂಧವಾಗಿ ಇರುವ register ನಲ್ಲಿ ನಮೂದು ಮಾಡಿದ್ದೇನೆ.

7. ನಂತರ ಪೊಲೀಸರು ಬಂದು ಸದರಿ ಸುನಿಲ್ ಕುಮಾರ ರವರ ಗಾಯದ ಪ್ರಮಾಣ ಪತ್ರವನ್ನು ಕೇಳಿದರು ಮತ್ತು ನಾನು ಕೊಟ್ಟಿದ್ದೇನೆ.

8. ಈಗ ನನಗೆ ತೋರಿಸಿದ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇದೆ ಮತ್ತು ಈ ದಾಖಲೆಯನ್ನು ನಾನೇ ಪೊಲೀಸರಿಗೆ ಕೊಟ್ಟಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ. 83 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ. 83(ಎ) ಎಂದು ಗುರುತಿಸಿದೆ.

9. ಮೂಲ MLC register ಆಸ್ಪತ್ರೆಯಲ್ಲಿ ಇದೆ, ಆದರೆ whats app ಮೂಲಕ ಸಂಬಂಧಪಟ್ಟ entry ಗಳನ್ನು ಪೊಲೀಸರು ನನಗೆ ಕಳುಹಿಸಿಕೊಟ್ಟಿದ್ದಾರೆ.

10. ನಿಪಿ. 83 ರಲ್ಲಿ ನಮೂದು ಇರುವ 1 ರಿಂದ 5 ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿವೆ. ಓರ್ವ ವ್ಯಕ್ತಿಯು ಒಂದು ದ್ವಿಚಕ್ರ ವಾಹನದಲ್ಲಿ ಹೋಗುವಾಗ ಮತ್ತೊಂದು ವಾಹನ ಬಂದು ಆ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದರೆ ಮತ್ತು ಆ ವ್ಯಕ್ತಿಯು ಕೆಳಗೆ ಬಿದ್ದರೆ ನಿಪಿ. 83 ರಲ್ಲಿ ನಮೂದು ಇರುವ ಎಲ್ಲಾ ಗಾಯಗಳು ಆಗುವ ಸಂಭವ ಇದೆ.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಸಿ.ಪಿ. ವಕೀಲರಿಂದಃ-

11. ಮೇಲೆ ಹೇಳಿದ ಸುನಿಲ್ ಕುಮಾರನು ನಮ್ಮ ಆಸ್ಪತ್ರೆಗೆ ಒಬ್ಬನೇ ಬಂದನು, ಆತನ ಜೊತೆ ಬೇರೆ ಯಾರೂ ಬಂದಿರಲಿಲ್ಲ. ನಮ್ಮ ಆಸ್ಪತ್ರೆಗೆ ಬರುವುದಕ್ಕಿಂತ ಮೊದಲು ಸದರಿ ಸುನಿಲ್ ಕುಮಾರನು ಬೇರೆ ಯಾವುದಾದರೂ ಆಸ್ಪತ್ರೆಗೆ ಹೋಗಿದ್ದನೋ ಹೇಗೆ ಎಂದರೆ ಹೋಗಿರಲಿಲ್ಲ ಮತ್ತು ಆ ವಿಷಯವನ್ನು ಸುನಿಲ್ ಕುಮಾರನೇ ಹೇಳಿದ್ದಾನೆ.

ಮರು ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

ಏನೂ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.